ಮಾಡುವಾಗ, ''ಅಪ್ಪ ನೀನ್ಯಾಕೆ ಬರ್ತ್ ಡೇ ಸೆಲೆಬ್ರೇಟ್ ಮಾಡಲ್ಲ?'' ಎಂದು ಕೇಳುತ್ತಿದ್ದ. ಆಗ ಮಾತ್ರ ಪೆಂಚಾಲಯ್ಯನಿಗೆ ತನ್ನ ಡೇಟ್ ಆಫ್ ಬರ್ತ್ ವಾಸ್ತವದಲ್ಲಿ ಅಸ್ತಿತ್ವವಿಲ್ಲವೆಂಬ ಸತ್ಯ ಅರಿವಿಗೆ ಬರುತ್ತಿತ್ತು. ಆದರೂ ತೋರಗೊಡದೆ ಮಗನ ಹತ್ತಿರ, ''ನಾವು ಹಳ್ಳಿಗಾಡಿನವರು ಬಿಡು ಮಗ, ನಮಗೆ ಬರ್ತ್ ಡೇ ಮಾಡಿಕೊಂಡು ರೂಢಿ ಇಲ್ಲ.'' ಎಂದು ಮಾತು ತೇಲಿಸುತ್ತಿದ್ದ. ಕಾಲೇಜು ಸೇರಿದ ಮೇಲೆ ಮಗ ಕುತೂಹಲಕ್ಕೆಂದು ತಂದೆ ಪೆಂಚಾಲಯ್ಯನ ಹುಟ್ಟಿದ ದಿನಾಂಕವನ್ನು ಪತ್ತೆ ಹಚ್ಚಿ, ತಾನೇ ಪೇಚಿಗೆ ಸಿಲುಕಿಕೊಂಡಿದ್ದ.

ಹಿಂದಿನ ನೆನಪುಗಳಿಂದ ಸದ್ಯದ ಬಿಕ್ಕಟ್ಟಿಗೆ ಏನೂ ಪ್ರಯೋಜನವಾಗಿರಲಿಲ್ಲ. ಯಾವುದೋ ಒಂದು ಹಂತದಲ್ಲಿ ತಾನು ಮನಸ್ಸು ಮಾಡಿದ್ದಿದ್ದರೆ ಡೇಟ್ ಆಫ್ ಬರ್ತ್ ತಪ್ಪನ್ನು ಎಲ್ಲಾ ಸರ್ಟಿಫಿಕೇಟುಗಳಲ್ಲೂ ತಿದ್ದುಪಡಿ ಮಾಡಿಸಿಕೊಳ್ಳಬಹುದಾಗಿತ್ತು. ತನ್ನ ಸೋಮಾರಿತನದಿಂದಾಗಿ ಒಂದು ಸಣ್ಣ ಪ್ರಮಾದ ಇಷ್ಟು ಜಟಿಲವಾದ ಸಮಸ್ಯೆಯನ್ನು ಧುತ್ತೆಂದು ತಂದೊಡ್ಡಿರುವುದು ಪೆಂಚಾಲಯ್ಯನ ಅರಿವಿಗೆ

